# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 837 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20.12.2021 |
| ಉತ್ತರಿಸುವ ಸಚಿವರು | : | ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಎಷ್ಟು ಪಡಿತರ ಕಾರ್ಡ್‌ದಾರರಿಗೆ ಒಂದರಂತೆ ಒಂದು ನ್ಯಾಯಬೆಲೆ ಅಂಗಡಿಯನ್ನು ಸ್ಥಾಪಿಸಲಾಗುತ್ತದೆ;</td><td>ಸಾರ್ವಜನಿಕ ವಿತರಣಾ ಪದ್ಧತಿ ಆದೇಶ 2016 ರನ್ವಯ ಗ್ರಾಮಾಂತರ ಪ್ರದೇಶದಲ್ಲಿ 500 ಮತ್ತು ನಗರ ಪ್ರದೇಶಗಳಲ್ಲಿ 800 ಪಡಿತರ ಚೀಟಿಗಳಿಗೆ ಒಂದರಂತೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶವಿದೆ. ಇದಲ್ಲದೇ ಅಗತ್ಯವಿರುವೆಡೆ ಹಾಡಿಗಳು/ತಾಂಡಗಳು/ ಗೊಲ್ಲರಹಟ್ಟಿ/ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಾಲೋನಿ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಕನಿಷ್ಠ 100 ಪಡಿತರ ಚೀಟಿಗಳಿದ್ದಲ್ಲಿ, ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶ ನೀಡಲಾಗಿದೆ.</td></tr>
<tr><td>(ಆ)</td><td>50 ಕೆ.ಜಿ ಯ ಒಂದು ಮೂಟೆಯನ್ನು ಕಾರ್ಡ್‌ದಾರರಿಗೆ ನೀಡುವಾಗ ಖಾಲಿ ಚೀಲಕ್ಕೂ 10 ರೂ. ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿರುವುದು ಸರಿಯೇ; (ಸ್ಪಷ್ಟವಾದ ಮಾಹಿತಿಯನ್ನು ನೀಡುವುದು)</td><td>ಈ ರೀತಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.</td></tr>
<tr><td>(ಇ)</td><td>ಕಲಬುರಗಿ ಜಿಲ್ಲೆಯಲ್ಲಿ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿರುವ ನ್ಯಾಯಬೆಲೆ ಅಂಗಡಿಗಳು ಎಷ್ಟು; ಮತ್ತು ಒಟ್ಟು ಪಡಿತರ ಕಾರ್ಡುದಾರರ ಸಂಖ್ಯೆ ಎಷ್ಟು; ಪ್ರತಿ ತಿಂಗಳು ಈ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳ ಪ್ರಮಾಣ ಎಷ್ಟು;</td><td>ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ಎರಡು ನ್ಯಾಯಬೆಲೆ ಅಂಗಡಿಗಳು ಇರುತ್ತವೆ. ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ನ್ಯಾಯಬೆಲೆ ಅಂಗಡಿಯ ಸಂಖ್ಯೆ</th><th>ಎಎವೈ ಪಡಿತರ ಚೀಟಿ</th><th>ಪಿಹೆಚ್‌ಹೆಚ್ ಪಡಿತರ ಚೀಟಿ</th><th>ಎನ್‌ಪಿಹೆಚ್‌ಹೆಚ್ ಪಡಿತರ ಚೀಟಿ</th><th>ಒಟ್ಟು ಪಡಿತರ ಚೀಟಿ</th></tr>
<tr><td>1</td><td>67</td><td>84</td><td>886</td><td>223</td><td>1193</td></tr>
<tr><td>2</td><td>68</td><td>75</td><td>795</td><td>116</td><td>986</td></tr>
</table>
ಆಹಾರಧಾನ್ಯ ಹಂಚಿಕೆ ಪ್ರಮಾಣದ ವಿವರ ಡಿಸೆಂಬರ್ 2021ರಲ್ಲಿದ್ದಂತೆ
<table>
<tr><th rowspan="3">ಕ್ರ.ಸಂ</th><th rowspan="3">ನ್ಯಾಯಬೆಲೆ ಅಂಗಡಿ ಸಂಖ್ಯೆ</th><th colspan="3">NFSA</th><th colspan="2">PMGKAY</th></tr>
<tr><th colspan="2">ಅಕ್ಕಿ</th><th rowspan="2">ಗೋಧಿ</th><th colspan="2">ಅಕ್ಕಿ</th></tr>
<tr><th>AAY</th><th>PHH</th><th>AAY</th><th>PHH</th></tr>
<tr><td>1</td><td>67</td><td>29.40</td><td>152.20</td><td>17.72</td><td>19.80</td><td>152.20</td></tr>
<tr><td>2</td><td>68</td><td>26.25</td><td>135.95</td><td>15.90</td><td>17.35</td><td>135.95</td></tr>
</table></td></tr>
</table>

| | | |
|---|---|---|
| (ಈ) | ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ಹೊಸದಾಗಿ ಇನ್ನೊಂದು ನ್ಯಾಯಬೆಲೆ ಅಂಗಡಿಯನ್ನು ಸ್ಥಾಪಿಸುವ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ, ಹೊಸ ನ್ಯಾಯಬೆಲೆ ಅಂಗಡಿಯನ್ನು ಸ್ಥಾಪಿಸುವುದು ಯಾವಾಗ; ನ್ಯಾಯಬೆಲೆ ಅಂಗಡಿಯ ಸ್ಥಾಪನೆಯ ಪ್ರಕ್ರಿಯೆ ಮತ್ತು ನಿಯಮಗಳೇನು; (ವಿವರ ನೀಡುವುದು) | ಇಲ್ಲ |
| (ಉ) | ಒಂದು ಬಾರಿ ಪಡಿತರ ಸಾಮಗ್ರಿ/ ಆಹಾರಧಾನ್ಯವನ್ನು ಪಡೆಯಲು ಪಡಿತರ ಕಾರ್ಡ್‌ದಾರರು ಪಡೆಯದಿದ್ದಲ್ಲಿ, ಆ ವೇಳೆ ಪಡೆಯದಿದ್ದ ಆಹಾರ ಧಾನ್ಯವನ್ನು ಮುಂದಿನ ತಿಂಗಳಿನ ಪಡಿತರ ವಿತರಣೆಯ ವೇಳೆ ಪಡೆದುಕೊಳ್ಳಬಹುದೇ ? | ಇಲ್ಲ. |

ಆನಾಸ 75 ಆನಾಸ 2021 (ಇ-ಆಫೀಸ್)

(ಉಮೇಶ್.ವಿ.ಕತ್ತಿ)

ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು

ಮತ್ತು ಗ್ರಾಹಕರ ವ್ಯವಹಾರಗಳ

ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು